Regd No. M 1299 SATYAVADI Founded 19 /

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 39] ಶನಿವಾರ 15—11—47 [ಬಿಡಿ ಪ್ರತಿ 3 ಪೈ

ಹೊಗೆಸೊಪ್ಪಿನ ಮೇಲೆ ನಿಷೇಧಾಜ್ಞೆ

ಬಿಹಾರ್‌ನಲ್ಲಿ 16 ವರ್ಷದ ಒಳಗಿನ ವವರು ಸಿಗರೇಟು ಅಥವಾ ಯಾವುದೇ ವಿಧವಾಗಿ ಹೊಗೆಸೊಪ್ಪನ್ನು ಉಪಯೋಗಿಸುವುದೇ ಆಗಲಿ. ಕೂಡದೆಂದು ನಿಷೇಧಾಜ್ಞೆ ಬಂದಿದೆ

ಪಾಕೀಸ್ತಾನದಲ್ಲಿ ಕಾಂಗ್ರೆಸ್ ಕೂಡದು ?

ಸಿಂಧ್ ಪ್ರಾಂತ್ಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ || ಚೋಯಿಟ್ ರಾಂಗಿದ್ವಾನಿಯವರು, ಪಾಕೀಸ್ತಾನದಲ್ಲಿ ಕಾಂಗ್ರೆಸ್ ಸಂಸ್ಥೆ ಮುಕ್ತಾಯವಾಗಬೇಕು; ಭಾರತದಲ್ಲಿ ಮುಸ್ಲಿಂ ಲೀಗ್ ಮುಕ್ತಾಯವಾಗಬೇಕು ಎಂಬ ತನ್ನ ಅಭಿಪ್ರಾಯವನ್ನು ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಾಲಿನಿಯವರಿಗ ಬರೆದಿರುವರು.

ನಿರಾಶ್ರಿತರ ಆಗಮನ

ಸಿಂಧ್‌ನಿಂದ ಈಗಾಗಲೇ ಒಂಬ ಸಾವಿರ ಮಂದಿ ವರೆಗೆ ನಿರಾಶ್ರಿತರು ಬಂಗಳೂರಿಗೆ ಬಂದಿದ್ದಾರೆ

ದೇಶವನ್ನು ತ್ಯಜಿಸದಿರಿ

ಭಾರತ ಸಮಾಜವಾದಿ ನಾಯಕ ಡಾ || ರಾಂ ಮನೋಹರ ಲೋಹಿಯಾ ಇವರು, ಹೈದರಾಬಾದಿನಿಂದ ಓಡಿಹೋಗುತ್ತಿರುವ ಪ್ರಜೆಗಳನ್ನು ಕರಿತು ದೇಶತ್ಯಾಗ ಮಾಡಬೇಡಿ ಎಂದು ಸನದೆಹಲಿಯಿಂದ ಹೇಳಿಕೆಯಿತ್ತಿದ್ದಾರೆ

ಂ ಂ

* ನಿಜಾಮರ ಆಡಳಿತ ನಾಶವಾಗಬೇಕು ಅಥವಾ ಸಾಧ್ಯವಾಗಬೇಕು ' ಎಂದು ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ

ಈ ರೀತಿ ಕರೆಯಬೇಕು!

ಕೇಂದ್ರ ಸರ್ಕಾರದ ನಾಯಕರಿಗೆ ಮಾತ್ರ ' ಪ್ರೈಂ ಮಿನಿಸ್ಟರ್ ' ಎಂಬ ಪದಪ್ರಯೋಗ ಮಾಡಬೇಕೇ ಏನಃ ಪ್ರಾಂತೀಯ ಮಂತ್ರಿಮಂಡಲದ ನಾಯಕರಿಗೆ ' ಪ್ರಿಮೀಯರ್ ' ಎಂದು ಕರೆಯಬೇಕು ಎಂದು ಪ್ರಭುತ್ವಾಜ್ಞೆಯೊಂದು ಹೊರಬಿದ್ದಿದೆ.

ಜಿನ್ನಾರವರ ಕಾರ್ಯ ?

ಮಧ್ಯ ಏಷ್ಯಾದಿಂದ ಭಾರತವನ್ನು ಕತ್ತರಿಸಬೇಕೆಂಬುದೇ ಪಾಕೀಸ್ತಾನ ಗವರ್ನರ್ ಜನರಲ್ ಜಿನ್ನಾರವರ ಪ್ರಯತ್ನವಿದೆಯೆಂದು ಲಂಡನ್ ' ಸ್ಟೇಟ್ಸ್‌ಮನ್ ' ಎಂಬ ಪತ್ರಿಕೆ ಲೇಖನವನ್ನು ಪ್ರಕಟಿಸಿದೆ.

ಹಿಂತೆಗೆದುಕೊಂಡಿತು

ಸಂಯುಕ್ತ ಜನಾಂಗ ಭದ್ರತಾ ಸಮಿತಿಯಲ್ಲಿ ಉಳಿದಿದ್ದ ಏಕ ಸ್ಥಾನ ಚುನಾವಣೆಯಿಂದ ಭಾರತ ಉಮೇದುವಾರಿಕೆ ವಾಪಸು ಪಡೆದ ಅಂಶವನ್ನು ಶ್ರೀಮತಿ ಪಂಡಿತರು ಅಧಿಕೃತವಾಗಿ ತಿಳಿಸಿದರು.

ಖುಲಾಸೆ

ಹಿಟ್ಲರಿನ ಅತ್ತೆಯು ನಾಜಿ ವಿಚಾರಣಾ ನ್ಯಾಯಸ್ಥಾನದವರಿಂದ ಖುಲಾಸೆ ಮಾಡಲ್ಪಟ್ಟಿದ್ದಾಳೆ.

ನಿಯಂತ್ರಣ ರದ್ದಾಗಲಿ

ಟ್ಯೂಟಿಕಾರ್ನ್‌ನಲ್ಲಿ ಗಾಂಧಿ ಸೇವಕ ಸಂಘದ ಆಶ್ರಯದಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ಆಹಾರ ಪದಾರ್ಥಗಳ ವೀಲಿನ ನಿಯಂತ್ರಣಗಳು ರದ್ದಾಗಬೇಕೆಂಬ ನಿರ್ಣಯಗಳಾದವು.

* ನಿನ್ನೆ ಸಂಜೆ ಇಂಟರ್ಮೀಡಿಯೆಟ್ ಕಾಲೇಜಿನಲ್ಲಿ ನೆಹ್ರೂ ಜಯಂತಿ ಜರುಗಿತು.

ಆದರ್ಶ ಪ್ರಧಾನಿ ಪಂ|| ನೆಹರು

' ಅಧಿಕಾರವೆಂಬುವದು' ಒಂದು ಮಾದಕ ಪದಾರ್ಥಕ್ಕೆ ಸಮವಾದದ್ದು. ಅಧಿಕಾರ ಸ್ಥಾನದಲ್ಲಿರುವ ವ್ಯಕ್ತಿಯು ಹೆಂಡವನ್ನು ಕುಡಿದವನಂತೆ ವರಿಸುತ್ತಾನೆ ' ಎಂಬುದು ಸರ್ವಸಾಮಾನ್ಯದಲ್ಲಿ ಕಾಣಬಹುದಾಗಲೀ, ಭಾರತ ಪ್ರಧಾನಿ ಶ್ರೀ ನೆಹರೂರವರು ಪ್ರಜೆಗಳೊಂದಿಗೆ ಕಲೆತುನುಲೆತು ಇರುತ್ತಾರೆ. ಪ್ರಜೆಗಳು ಅವರನ್ನು ಸುಲಭವಾಗಿ ಕಾಣಲು ಅವಕಾಶವಿರುತ್ತದೆ. ಈ ಬಗೆಯಲ್ಲಿ ನಿಗರ್ವಿಗಳಾಗಿ ಜೀವಿಸುವವರು ಅತಿ ವಿರಳವೆನ್ನಬಹುದು ನೆಹ್ರೂರವರ ಸದ್ಗುಣಗಳನ್ನು ವ್ಯಕ್ತಪಡಿಸಲು ಅನೇಕ ಸಂಘಟನೆಗಳು ಒದಗಿದೆ, ಅವುಗಳಲ್ಲಿ ಕೆಲವನ್ನು ವಾಚಕರ ಅವಗಾಹನೆಗೆ ಇದರಡಿ ಕೊಡಲಾಗಿದೆ.

ದೆಹಲಿಯಲ್ಲಿ ಪಂಡಿತರ ಮನೆಯು ಪಂಜಾಬಿನಿಂದ ಬಂದ ನಿರಾಶ್ರಿತರಿಂದ ತುಂಬಿಹೋಗಿತ್ತು. ಪ್ರಾತಃಕಾಲ ಆಫೀಸಿಗೆ ಹೋಗುವಾಗ ಒಂದು ಬಾರಿ, ಮಧ್ಯಾಹ್ನ ಭೋಜನಾನಂತರ ಇನ್ನೊಂದು ಬಾರಿ ಅವರಿಗೆ ಭೇಟಿ ಇತ್ತು, ಅವರ ಹೃದಯವಿದ್ರಾವಕ ಕಥನೆಗಳನ್ನು ಬೇಸರಗೊಳ್ಳದೆ ಕೇಳಿ, ಹೊರಟುಹೋಗುತ್ತಿದ್ದರು. ಹಗಲೆಲ್ಲಾ ರಾಜಕೀಯ ವ್ಯವಹಾರಗಳನ್ನೆಲ್ಲವನ್ನೂ ಮುಗಿಸಿಕೊಂಡು ರಾತ್ರಿ ಅಯಾಸದೊಂದಿಗೆ ಮನೆಗೆ ಬರುವ ವೇಳೆಗೆ ಮತ್ತೊಂದು ಗುಂಪಿನವರು ಇವರನ್ನು ಕಂಡು ಮಾತನಾಡಲು ಸಿದ್ಧರಾಗಿರುತ್ತಿದ್ದರು. ಅಯಾಸದಿಂದಿದ್ದರೂ ನೆಹ್ರೂಜೀಯವರು ಸ್ವಲ್ಪವೂ ಬೇಸರಗೊಳ್ಳದೆ ಅವರ ವೇದನಾಪೂರ್ವಕ ಸಂಘಟನೆಗಳನ್ನು ಶ್ರದ್ಧೆಯಿಂದ ಕೇಳಿ ಅವರನ್ನು ಸಮಾಧಾನಗೊಳಿಸುತ್ತಿದ್ದರು.

ಈಚೆಗೆ ಕಾಶ್ಮೀರ ಸಂಬಂಧದಲ್ಲಿ ನೆಹರೂರವರು ನಡೆಸಿದ ವಿಚಾರಗಳು ಎಲ್ಲರಿಗೂ ತಿಳಿದೇ ಇದೆ

ಗೂಂಡಾಗಳನ್ನು ಹಿಡಿದು ಪೋಲೀಸಿಂಗೆ ಕೊಟ್ಟಿದೂ, ಕ್ಯೂನಲ್ಲಿ ಅವರಿಗೆ ರೇಷ್ ಸಿಕ್ಕಿದಿದ್ದಾಗ ಮಾಡಿದವಿಚಾರವೂ ಚರಿತಾರ್ಹವಾಗಿಫ.

ಸ್ವತಂತ್ರ ಭಾರತದ ಪ್ರಧಾನಿಯು ಮುಂದೆ ಒರುವ ಪ್ರಧಾನಿಗಳಿಗೆ ಮಾರ್ಗದರ್ಶಿಯಯಾಯೂ, ಆದರ್ಶ ಪಧಾನಿಯಾಯಾಯೂ ಇರುವುದು ನಮ್ಮೆಲ್ಲರ ಸುಕೃತವಲ್ಲದೆ ಮತ್ತೇನು ?

ನೆಹರು ಚಿರಂಕಾಲ ಬಾಳಲಿ.

ಡಾಲ್ಟನ್ನರ ರಾಜೀನಾಮೆ

ಕಾನುನ್ಸ್ ಸಭೆಗೆ ಅರುಹುವ ಮುನ್ನ ಲಂಡನ್ ಸ್ಟಾರ್ ಪತ್ರಿಕೆಯ ಲಾಬಿ ಬಾತ್ಮಿದಾರನಿಗೆ ಆಯವ್ಯಯಪಟ್ಟಿಯ ಹಲವು ವಿವರಗಳನ್ನು ತಿಳಿಹೇಳಿದ್ದುಂಟು ಎಂದು ಒಪ್ಪಿಕೊಂಡು ಬ್ರಿಟಿಷ್ ಆರ್ಥಿಕ ಸಚಿವ ಹ್ಯೂಜ್ ಡಾಲ್ಟನ್ ತಮ್ಮ ಪದವಿಗೆ ರಾಜೀನಾಮೆ ಇತ್ತರು ಸ್ಟಾಫರ್ಡ್‌ಕ್ರಿಪ್ಸರು ಆ ಹುದ್ದೆ ವಹಿಸಿಕೊಂಡರು

ಸಂಬಂಧವಿದೆ

ಹೈದರಾಬಾದಿನ ಸಮಸ್ಯೆ ಭಾರತಕ್ಕೆ ಸೇರಿದ್ದು ಎಂದು ಸರ್ದಾರ ಪಟೇಲರು ಜುನಗಡದಲ್ಲಿ ಹೇಳಿದರು

ಸಿ. ಪಿ. ಯಾತ್ರೆ

ತಿರುವಾಂಕೂರಿನ ಮಾಜಿ ದಿವಾನರಾದ ರಾಮಸ್ವಾಮಿ ಅಯ್ಯರ್‌ರವರು ಜನವರಿ 13 ರಿಂದ ವೇದಾಂತದ ಒಗ್ಗೆ ಉಪನ್ಯಾಸ ಕೊಡಲು ಅವೇಂಟಿಕ ಜಪಾರ್ ಮತ್ತು ಆಸ್ಟ್ರೇಲಿಯದಲ್ಲಿ 6 ತಿಂಗಳು ಪ್ರವಾಸ ಮಾಡುವರು

ಪರಾರಿ

ಕಲ್ಕತ್ತ ಹುಗ್ಲಿ ಜಿಲ್ಲೆಯ ಸಶಸ್ತ್ರ ಪೋಲೀಸನು ಸಂಬಳಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದ 26 ಸಾವಿರ ರೂ ತೆಗೆದುಕೊಂಡು ಹೊರಟು ಹೋದನು

ಲಂಚ

ಮದರಾಸಿನ ಸರಬರಾಜು ಇಲಾಖೆ ಅಧಿಕಾರಿ ಆರ್ಥರ್ ಬ್ಲಾಂಡರನ್ನು ಲಂಚದ ಆರೋಪದ ಮೇಲೆ ದಸ್ತಗಿರಿ ಮಾಡಲಾಗಿದೆ

ಎ. ಎಂ. ಸಿ. ಸಿ.

ಸ್ವಂ. ಸು] ಚಿತ್ರದುರ್ಗ, ಡಿ 15

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನ ನಿನ್ನೆಯಿಂದ ಆರಂಭವಾಯಿತು.

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಜಂಗಲರಾಯಪ್ಪಡ್ಡಿ ಮತ್ತು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರಿ ಎಸ್. ನಿಜಲಿಂಗಪ್ಪ ಇವರುಗಳ ವೆಂವಣಿಗೆ ವೈಭವದಿಂದ 2 ಜೊತೆ ಎತ್ತಿನ ರಥದಲ್ಲಿ ನೆರವೇರಿತು.

ಶ್ರೀ ನಿಜಲಿಂಗಪ್ಪನವರು ಭಾರತ ಧ್ವಜವನ್ನು ಮತ್ತು ಶ್ರೀ ರೆಡ್ಡಿಯವರು ಮೈಸೂರು ಧ್ವಜವನ್ನು ಆರೋಹಣ ಮಾಡಿದರು

60 ಚಕ್ಕಡಿಗಳಲ್ಲಿ ಒಂದು ಲಕ್ಷ ಜನರಿಗೆ ಮೇಲ್ಪಟ್ಟು ನೆರೆದಿದ್ದರು.

ನೆಹರು ಜಯಂತಿ

ನಿನ್ನೆ ಕನ್ನೇಗೌಡನಕೊಪ್ಪಲು ವಿದ್ಯಾರ್ಥಿ ಬಾಲಕರ ಸಂಘದವರು ಬೆಳಿಗ್ಗೆ ನೆಹರೂ ಜಯಂತಿ ಪ್ರಯುಕ್ತ ಭಾರತ ಧ್ವಜ ಮತ್ತು ಮೈಸೂರು ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ನಾರಾಯಣ ಸ್ವಾಮಿಯವರು ಭಾಷಣ ಮಾಡಿ ಶಾ. ವಿದ್ಯಾರ್ಥಿಗಳು ಇನ್ನು ಮುಂದೆ ರಾಜಕೀಯದಲ್ಲಿ ತೊಡಗದೆ ಶ್ರದ್ಧೆಯಿಂದ ವಿದ್ಯಾಭ್ಯಾಸದ ಕಡೆ ಗಮನಕೊಡಬೇಕೆಂದು ಪ್ರಾರ್ಥಿಸಿದರು.

Save the Cow

At Opera
From 15-11-47

Daily 3 Shows

THINGS TO COME

— with —

Raymond Massey
Ralf Richardson
Sir Cedric Hardwicke

Woodlands

ಕಿಕ್ಕಿರಿದ ಜನಸಂದಣಿಯಿಂದ
ಕೂಡಿದ 3 ನೇ ವಾರ
ಅಶೋಕಕುಮಾರ್
ವೀರಾ, ಪ್ಯಾರೊ, ಪಾತ್ರವಹಿಸಿರುವ

ಷಿಕಾರಿ

(ಅನೋಘ ಹಿಂದಿ ಚಿತ್ರ)
ಪ್ರತಿ ದಿನ 3 ಆಟಗಳು

Woodlands

Morning Shows at 10-30
From 14—11—47 For 4 days

Dead Reckoning

— starring —

Humphrey Bogart
Lizabeth Scott

ಗೋ ವಧೆ ನಿಲ್ಲಲಿ

Edited, Printed and Publishe by M S Krishna Rao at the Satyavadi Press Chamaarja Agahar Myrsore.

ಶ್ರೀ 'ಓಂ' ಗುರುತಿನ
ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟ ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತ್ತದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

Office of the Rationing Officer
MYSORE CITY

No C E D 259 / 47-8 Dated 7—11—1947

NOTIFICATION

It is hereby notified for the information of the Public that about 89893 damaged and unservisable gunnies stocked in the several Government Sub-godowns in Mysore will be sold by Public Auction at the several godowns on 8 th December and subsequent days

— The terms of sales are as follows —

1 Each bidder should deposit a sum of Rs 50 to become eligible to bid in the auction, This amount will be refunded after the sale is concluded

2 The highest bidder must deposit 25 per cent of the sale amount of the spot as soon as the sale is concluded and pay up the balance within 3 days from the date of confirmation of sale. In default thereof, the deposit amount will be forfeited to Government and the gunnies will be resold at his risk. holding him responsible for the loss to Government that may occur in the resale and he will not be allowed to participate in the profit that may be realised thereof

3 The sale will be conducted either by the Rationing Officer or by his assistants and the sale is subject to the confirmation of the Director of Food Supplies in Mysore, Bangalore, who reserves the right of accepting or rejecting any bid without assigning any reason therefof The bidder shall in the event of cancellation of sale, be entitled to no ompensation or relief in whatever form

4 The removal of auctioned stocks will be permitted only after full payment of the amount of bid, suhject to the conditions noted at (1) above

5 The stocks may be inspected at the depots by the respective bidders between 3 and 5 p·m on any working day,

6 The purchaser should remove the stocks within 3 days on intimation of confirmation of the sale after paying the full purchase money. This office will not be responsible for losses occurred on account of its non-removal

7 The Government will not be responsible for any shortcomings in the description or quality of the goods sold,

(Sd) M. Srinivasalu Naidu
Rationing Officer. Mysore City

SHAKTI SUDHA
A Superb TONIC